ಅ) ನಿಜ

ಇ) ಈ ಬಾರಿ ಜಾಹೀರಾತು ನೀಡಲಾಗಿದೆ. ವಿವರ ಈ ಕೆಳಕಂಡಂತಿದೆ.

1) ಡೆಕ್ಕನ್ ಹೆರಾಲ್ಡ್ 23-8-89

2) ಕನ್ನಡ ಪ್ರಭ 21-12-89

3) ಇಂಡಿಯನ್ ಎಕ್ಸ್‌ಪ್ರೆಸ್ 23-12-89

4) ಪ್ರಜಾವಾಣಿ 25-6-90

5) ಡೆಕ್ಕನ್ ಹೆರಾಲ್ಡ್ 28-6-90

ಈ) ಉದ್ಭವಿಸುವುದಿಲ್ಲ.

ನಗರ ಪ್ರದೇಶದ ಕಡು ಬಡವರಿಗೂ ಹಸಿರು ಕಾರ್ಡಿನ ಸೌಲಭ್ಯವನ್ನು ವಿಸ್ತರಣೆ

161 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ನಗರ ಪ್ರದೇಶದಲ್ಲಿರುವ ಕಡುಬಡವರಿಗೂ ಸಹ ಹಸಿರು ಕಾರ್ಡಿನ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರ ತೀರ್ಮಾನಿಸಿರುವುದು ನಿಜವೇ?

2) ಹಾಗಿದ್ದಲ್ಲಿ, ರಾಜ್ಯದ ಎಷ್ಟು ನಗರಗಳಿಗೆ ಈ ಸೌಲಭ್ಯಗಳು ಬೊರೆಯುತ್ತದೆ? ಆ ನಗರಗಳು ಯಾವುವು?

3) ಇದಕ್ಕಾಗಿ ಸರ್ಕಾರದವರಿಗೆ ವೆಚ್ಚವಾಗುವ ಹಣವೆಷ್ಟು?

4) ಈ ಸೌಲಭ್ಯವನ್ನು ನಗರಗಳಲ್ಲಿನ ಕಡುಬಡವರಲ್ಲದೆ ಮಧ್ಯಮ ದರ್ಜೆಯವರಿಗೂ ವಿಸ್ತರಿಸುವ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1) ಇಲ್ಲ

2) ಉದ್ಭವಿಸುವುದಿಲ್ಲ

3) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

4) ಉದ್ಭವಿಸುವುದಿಲ್ಲ

ದಶಲಕ್ಷ ಬಾವಿ ಯೋಜನೆಯಲ್ಲಿ ಸರ್ಕಾರದ ಗುರಿ ಮತ್ತು ಸಾಧನೆ

171 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಶಲಕ್ಷ ಬಾವಿ ಯೋಜನೆಯಡಿಯಲ್ಲಿ 1990-91ನೇ ಸಾಲಿನಲ್ಲಿ ಸರ್ಕಾರದವರು ನಿಗದಿಪಡಿಸಿರುವ ಗುರಿಯೆಷ್ಟು?

ಆ) ಸದರಿ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?

ಇ) ಈ ಯೋಜನೆಯಡಿಯಲ್ಲಿ ಹಾಸನ ಜಿಲ್ಲೆಗೆ ಒದಗಿಸಿರುವ ಹಣವೆಷ್ಟು?

ಈ) ಈ ಬಗ್ಗೆ ಸಾಧಿಸಿರುವ ಗುರಿಯೆಷ್ಟು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್